ಮೈಸೂರ ಗೆಜೆಟ್

ಸರ್ಕಾರದಿಂದ ಘಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಫಿಬ್ರವರಿ ತಾ॥ 21, ಸ್ರ್ 1885.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರುವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಿನ್ಯಾನ್ಷಿಯಲ್ ಇಲಾಖೆ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡಿ ನಲ್ಲತಕ್ಕ ಬಗ್ಯೆ ಪರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ಯಾಂಡ್ ಪೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನ್‌ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಷ್ಟೇಸ್‌ಮೆಂಟ್ ಯಾನೇ ಪರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲೆಕೇಟಾದ ಡಿವಾಂಡ್ ಡ್ರಾಫ್‌ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಷ್ಟೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡಿರ್ನ್,
ಕಾಂಪ್ಟ್ರೋಲರ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರೀಯವರ ಕೋರ್ಟ್‌ನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 5.

ಮೃತಪಟ್ಟ ಮೇಸ್ತ್ರಿ ಚಿಕ್ಕಣ್ಣನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಜವರೆ ಮೈನರ್, ಗಾರ್ಡಿಯರ್ ಚಿಕ್ಕಣ್ಣ, ಮೃತಪಟ್ಟ ಸದರೀ ಮೇಸ್ತ್ರಿ ಚಿಕ್ಕಣ್ಣನಿನೆ ಮೊಮ್ಮಗ ಆಗಬೇಕೆಂಬ ಹಕ್ಕು ದಾರಿ ಮೇಲೆ ಶ್ರೀರಂಗಪಟ್ಟಣದ ಸ್ಥಳದ ಜವರೆ ಮೈನರ್ ಗಾರ್ಡಿಯರ್ ಚಿಕ್ಕಣ್ಣನು, ಸದರೀ ವಾಸಸ್ಥನಾಗಿ ಮೃತಪಟ್ಟ ಮೇಸ್ತ್ರಿ ಚಿಕ್ಕಣ್ಣನ ಜಿಂದಗಿ ಬಗ್ಯಾಗಿ ಬರತಕ್ಕ 300 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಃದ ಜವರ ಮೈನರ್ ಗಾರ್ಡಿಯರ್ ಚಿಕ್ಕಣ್ಣನ ಅರ್ಜೀಯನ್ನು 1885ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 26ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮೇಸ್ತ್ರಿ ಚಿಕ್ಕಣ್ಣನ ಆಸ್ತಿಗೆ ಹಕ್ಕುದಾರರಾದ ವಿಶ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 49.

ಮೃತಪಟ್ಟ ಕಳ್ಳಕಟ್ಟಿಯೆಂಬವನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಮುಲ್ಲಕಟ್ಟಿ ಮೃತಪಟ್ಟ ಸದರೀ ಕಳ್ಳಕಟ್ಟಿಯಂಬವನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಯಳಂದೂರು ಸ್ಥಳದ ಮುಲ್ಲಕಟ್ಟಿಯಂಬವನು ಸದರೀ ವಾಸಸ್ಥನಾಗಿ ಮೃತಪಟ್ಟ ಕಳ್ಳಕಟ್ಟಿಯಂಬವನ ಜಿಂದಗಿ ಬಗ್ಯಾಗಿ ಬರತಕ್ಕ 950 ರೂಪಾಯಿಗಳ ಸೂಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾನೆ.

ಸದರೀ ದರಖಾಸ್ತುದಾರನಾದ ಮುಲ್ಲಕಟ್ಟಿಯಂಬವನ ಅರ್ಜೀಯನ್ನು 1885ನೇ ಇಸವಿ ಮಾರ್ಚೀ ತಿಂಗಳು ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಳ್ಳಕಟ್ಟಿಯಂಬವನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಫಿಬ್ರವರೀ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಸಾಗಿದೆ.

ವಿ. ಯರ್. ನರಸಿಪ್ಪಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ್.

ತಾರೀಖು 1ನೇ ಫಿಬ್ರವರೀ 1885.

ಇದರಿಂದ ತಿಳಿಸುವದೇನಂದರೆ, ಮೈಸೂರು ಜೈಲ್‌ನಲ್ಲಿ ಬೈದು ಮಾಡಲ್ಪಟ್ಟಿರುವ ಖೈದಿಗಳ ಉಪಯೋಗದ ಬಗ್ಯೆ ಸ್ರ 1885ನೇ ಇಸವಿ ಏಪ್ರೈಲ್ ಗುಬ್ಬೀ ತಾರೀಖು ಮೊದಲು 1886ನೇ ಮಾರ್ಚಿ 31ನೇ ತಾರೀಖುವರಿಗೆ ಎರಡು ದಿನಗಳೂ ಕೀರಿ ಬೇಕಾದ ಆಹಾರ ವ ಗೈರೇ ದರೋಬಸ್ತು ಜಿನಸುಗಳನ್ನೂ ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಬಂದು ಮಾಡಲ್ಪಟ್ಟ ದರಖಾಸ್ತುಗಳನ್ನು ಮೈಸೂರು ಜೈಲ್ ಸೂಪರ್‌ಟೆಂಡೆಂಟರವರು, ಸ್ರ 1885ನೇ ಇಸವಿ ಮಾರ್ಚೀ 31ನೇ ತಾರೀಖು ವರಿಗೆ ತೆಗದುಕೊಳ್ಳುವರು.

2. ಸದರೀ ಮೇಲೆ ಹೇಳಿದ ತಾರೀಖು ತರುವಾಯ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡುವದಿಲ್ಲ.

3. "ಮೈಸೂರು ಜೈಲ್‌ಗಾಗಿ ಆಹಾರ ಪದಾರ್ಥಗಳ ಸರಬರಾಯಿ ಬಗ್ಯೆ ದರಖಾಸ್ತುಗಳು" ಯೆಂಬದಾಗಿ ದರಖ್ತಾಗಳ ಮೇಲೆ ವಿಳಾಸ ಬರದು ಕಳುಹಿಸತಕ್ಕದ್ದು.

4. 500 ರೂಪಾಯಿಗಳು ನಗದಾಗಿ ಆಥವಾ ಕರೆನ್ಸೀ ನೋಟುಗಳ ಮೂಲಕ ಡಿಪಾಜಿಟ್‌ನಿನೀ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡಲಾರವು.

5. ದರಖಾಸ್ತುಗಳು ಮೈಸೂರು ಜೈಲ್ ಆಫೀಸಿನಲ್ಲಿ, ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರ ರೂಬರೂ ಮೇಲ್ಕಂಡ ತಾರೀಖಿನೊಳಗೆ ಮೈಸೂರು ಜೈಲ್ ಸೂಪರ್‌ಟೆಂಡೆಂಟರವರಿಂದ ಪ್ರಾತಃಕಾಲ 7 ಘಂಟೆಗೆ ಖುಲ್ಲಾ ಮಾಡಲ್ಪಡುವವು.

6. ದರೋಬಸ್ತು ದರಖಾಸ್ತುಗಳಲ್ಲಿಯೂ, ಈ ಕೆಳಗೆ ನಮೂದಿಸುವ ತರಗತಿಯ ಪ್ರತಿ ಖೈದಿಗೂ ದಿನ ಬಂದಕ್ಕೆ ಆಗತಕ್ಕ ದರವು ನಮೂದಿಸಲ್ಪಡತಕ್ಕದ್ದು.

ನೇಟಿವ್ ಕೂಲಿಯವರಾದ ಗಂಡುಸರಿಗೆ		A ಕ್ಲಾಸ್	..	..
ಡಿಟೋ	ಡಿಟೋ	B ,,	..	..
ಡಿಟೋ	ಡಿಟೋ	C ,,	..	..
ನೇಟಿವ್ ಕೂಲೀ ವಾಡದ ಗಂಡುಸರು, ಹೆಂಗಸರು ಸಾದು ಕೈದಿನ ಮತ್ತು ವಿಚಾರಣೆಯಲ್ಲಿ ಇರತಕ್ಕವರು, D ಕ್ಲಾಸ್				
ಯೂರೋಪಿಯರ್‌ಗಳು ವ ಈಸ್ಟ್ ಇಂಡಿಯರ್‌ಗಳು			..	..
ರಾಗಿ ಸಹಿತವಾದ ಆಸಪತ್ರೆ ಪಥ್ಯಪದಾರ್ಥಗಳು			..	..
ಅಕ್ಕಿ ಸಹಿತವಾದ	ಡಿಟೋ		..	..

7. ದರಖಾಸ್ತು ಮಾಡಲ್ಪಟ್ಟ ದರಗಳು ಆಹಾರ ಜಿನಸೀಗಳ ಸ್ಕೇಲ್ ಪಟ್ಟಿಯಲ್ಲಿ ನಮೂದಿರುವ ಪದಾರ್ಥಗಳು ಮಾತ್ರವಲ್ಲದೆ (ಸ್ಕೇಲ್‌ಪ್ರಕಾರ) ಆಸಿಪತ್ರಿ ಆಹಾರ ಪದಾರ್ಥಗಳು, ಕಾಹಿಲೇ ಮನುಷ್ಯರಿಗೆ ವಿಶೇಷ ಪದಾರ್ಥಗಳು, ನಪ್ಯವಾಗತಕ್ಕ ಪದಾರ್ಥಗಳು, ದೀಪದ ಯಂತ್ರ, ಕೆರೋಸಿರ್ಯ ಯಂತ್ರ, ಲಾಂದ್ರೆಗಳು, ಮತ್ತು ಅನುಗಳ ರಿಪೇರಿ ಮಾಡಿಸುವಣ, ಕೈದೀರು ಸ್ನಾನ ಮಾಡಲಿಕ್ಕೆ ೀಗೇಕಾಯಿ, ತಮೂಂ ತಾಂಬ್ರ ಪಾತ್ರೆಗಳ ರಿಪೇರಿ ವ ಕಲಾಯಿ, ಪರಕೆಗಳು, ಅಡಿಗೆಮಾಡುವದಕ್ಕೆ ತಾಂಬ್ರ ಮತ್ತು ಮಣ್ಣಿನ ಪಾತ್ರೆಗಳು, ಕೈದಿಗಳು ಊಟಮಾಡುವದಕ್ಕೆ ಮಂಣಿನ ಪರಿವಾಣಗಳು, ಪಾದುಬಾನೆ ಬುಟ್ಟಿಗಳು, ಬಣಗಿದ ಮಂಣು, ನೀರುಕುಡಿಯುವದಕ್ಕೆ ಮಂಣಿನ ಲೋಟುಗಳು, ಹೆಂಣು ಕೈದೀರಮಕ್ಕಳಿಗೆ ರ್ಕಾವ ಹಾಲು, ರೊಟ್ಟಿ ಸಕ್ಕರೆ ಪಗ್ಯೆರೇ ಪದಾರ್ಥಗಳು, ಹೊಗೆಹಾಕುವ ಬಗ್ಯೆ ಗಂಧಕ, ಚವಳು ಮತ್ತು ಕ್ರಮವಾಗಿ ಸರಬರಾಯಿ ಮಾಡಲ್ಪಡುವ ಬಟ್ಟಿ ಬಿವಾಯಿ ಖೈದಿಗಳಿಗೆ ಬೇಕಾದ ದರೋಬಸ್ತು ಇತರ ಪದಾರ್ಥಗಳೂ ಅಡಗಿರತಕ್ಕವು.

8. ಸೂಪರ್‌ಟೆಂಡೆಂಟರವರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ: ಹೀಗೆ ತಿರಸ್ಕರಿಸಲಿಕ್ಕೆ ಯಾವ ನಿಮಿತ್ತವನ್ನೂ ಅವರು ತಿಳಿಸಬೇಕಾದ್ದಿಲ್ಲವು.

9. ಮಂಜೂರಾದ ದರಖಾಸ್ತುದಾರನ ಡಿಪಾಜಿಟ್ ವೊಬಲಗು ನಿಲ್ಲಿಸಿಕೊಳ್ಳಲ್ಪಟ್ಟ್ಯು, ಆತನು ಕಂಟ್ರಾಕ್ಟು ಮುಚ್ಚಲಿಕೆ ಬರದು ಕೊಡಲಿಕ್ಕಾಗಲಿ, ನಗದಾದರೂ ಗವರ್ಮೆಂಟ್ ಪತ್ರಗಳ ಮೂಲಕವಾದರೂ 500 ರೂಪಾಯಿಗಳ ವೊಬಲಿಗೆ ಜಾಮೀನನ್ನು ತನ್ನ ದರಖಾಸ್ತು ಮಂಜೂರಾದ ನಂಗತಿ ತನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು ಬಂದು ವಾರದ ವಳಗಾಗಿ ಕೊಡಲಿಕ್ಕಾಗಲಿ ತಪ್ಪಿದರೆ, ಅದು ಸರಕಾಕ್ಕೆ ದಂಡವಾಗಿ ಜೀರಿಸಿ ಕೊಳ್ಳಲ್ಪಡುವದು.

10. ಕಂಟ್ರಾಕ್ಟುದಾರಗೆ ನಗದು ಆಡ್ವಾನ್ಸು ಯಾವದೂ ಕೊಡಲ್ಪಡಲಾರದು, ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗೆ ಪ್ರತಿ ತಿಂಗಳು 1ನೇ ತಾರೀಖಿಗೆ ತರುವಾಯ ಸಾಧ್ಯವಾದಷ್ಟು ತ್ವರೆಯಾಗಿ ಮೈಸೂರು ಜೈಲ್ ಸೂಪರಿಂಟೆಂಡೆಂಟರವರಿಂದ ವೊಬಲಗು ಕೊಡಲ್ಪಡುವದು.

11. ಕಂಟ್ರಾಕ್ಟುದಾರನಿಗೆ ಸಾವಾನುಗಳ ಬಗ್ಯೆ ಬಂದು ಖೋಲಿಯು ಬಿಡಲ್ಪಡುವದು, ಅದರಲ್ಲಿ ಆತನು ನಪ್ಯವಾಗದ ದರೋಬಸ್ತು ಪದಾರ್ಥಗಳನ್ನೂ ಇಟ್ಟುಕೊಳ್ಳಬಹುದು. ಮಾಂಸ ವಗೈರೇ ನಪ್ಯವಾಗುವ ಪದಾರ್ಥಗಳು ಪ್ರತಿ ದಿನ ಬೆಳಿಗ್ಯೆ $7\frac{1}{2}$ ಘಂಟೆಗೆ ಜೈಲ್ ನಲ್ಲಿ ಇರತಕ್ಕದ್ದು.

12. ಕಂಟ್ರಾಕ್ಟು ವಳ ಷಿಕ್ಕಿಗೆ ಕೊಡಲ್ಪಡಕೂಡದು.

13. ಕಂಟ್ರಾಕ್ಟಿನ ನಿಬಂಧನೆಗೆ ತಪ್ಪಿ ನಡೆಯುವ ಬಗ್ಯಾಗಲಿ, ಕಿರದು ತರವ ಯಾವ ಪದಾರ್ಥಗಳನ್ನು ಕೊಡುವ ಬಗ್ಯಾಗಲಿ ಮೈಸೂರು ಜೈಲ್ ಸೂಪರ್‌ಟೆಂಡೆಂಟರವರೆ ಯಕ್ಸ್‌ಕ್ಯೂರೀಯಿಂದ 50 ರೂಪಾಯಿಗೆ ಮಿಂಚದ ಬಂದು ಜುರ್ಮಾನೆಯು ಹಾಕಲ್ಪಡುವದು; ಖರ್ ಖಾಸ್ ಆ ಮೇರೆ ತಪ್ಪಿದರೆ ಕಂಟ್ರಾಕ್ಟು ರದ್ದು ಮಾಡಲ್ಪಟ್ಟು ಜಾಮೀನ್ ವೊಬಲಗು ಸರಕಾರಕ್ಕೆ ಜೀರಿಕೊಳ್ಳಲ್ಪಡುವದು.

14 ಕಂಟ್ರಾಕ್ಟು ತಪ್ಪಿ ನಡಿಯುವ ದರೋಬಸ್ತು ಸಂಗತಿಗಳೊಳಗೂ ಮೈಸೂರು ಜೈಲ್ ಸೂಪರ್‌ಟೆಂಡೆಂಟರವರ ನಿರ್ಣಯವೇ ಆಬ್ಜೆಕ್ಟಾಗಿರತಕ್ಕದ್ದು.

16. ಆಹಾರ ದರದ ಪಟ್ಟಿಯನ್ನು ಯಿನ್ನು ಅವಶ್ಯಕವಾದ ಹೆಚ್ಚಿಗೆ ತಪಸೀಲ್‌ಗಳನ್ನು ಸಹಾ ಮೈಸೂರು ಜೈಲ್ ಸೂಪರ್‌ಟೆಂಡೆಂಟರವರನ್ನು ಕೇಳಿ ತಿಳದುಕೊಳ್ಳಬಹುದು. ಹಾಲಿ ಜೈಲ್‌ನಲ್ಲಿ 209 ಮಂದಿ ಕೈದೀರು ಇದ್ದಾರೆ, ಈ ಸಾಲಿನಲ್ಲಿ 250ರ ವರಿಗೆ ಜಾಸ್ತೀ ಆಗಬಹುದಾಗಿ ಅಂದಾಜ್ ಇರುತ್ತೆ.

ಟಿ. ಜೆ. ಮೆಕ್‌ಗಾರ್ಗ್,
ಸೂಪರ್‌ಟೆಂಡೆಂಟ್.

ಹಾಸನ ಸಬ್ ಡಿವೀಜ್ಯ.

ತಾರೀಖು 4ನೇ ಫಿಬ್ರವರಿ 1885.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ವಿರ್ವಾ ಸಾಹೇಬರವರ ಹುಕ್ಕುಂ ಬಮೋಜೀಬ್ ಹಾಸನ ಸಬ್ ಡಿವೀಜ್ಯ ಪೈಕಿ ಮಂಜರಾಬಾದ್ ತಾಲ್ಲೂಕಿನಲ್ಲಿ ಇರುವ ಮೂರನಹಳ್ಳಿ ಘಾಟಿಯಲ್ಲಿ ಟೋಲ್‌ಗೇಟ್ ಯಿಂಬ ಸುಂಕದ ಕಟ್ಟೆ ವಳಗೆ ಸ್ಯ 1885ನೇ ಏಪ್ರಲ್ ಮಾಹೆ 1ನೇ ಮಕ್ತುಂ ಲಾಗಾಯಿತು 1886ನೇ ಇಸವಿ ಮಾರ್ಚಿ 31ರ ವರಿಗೆ ಸುಂಕ ವಸೂಲ್ ಮಾಡುವ ಸ್ವಾತಂತ್ರ್ಯವು ಸ್ಯ 1885ನೇ ಇಸವಿ ಮಾರ್ಚಿ ತಾರೀಖು 18ರಲ್ಲು ಸಕ್ಲೇಸಪುರ ಮೊಕ್ಕಾಂ ತಾಲ್ಲೂಕು ಕಚೇರಿಯೊಳಗೆ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.